*A.*—Sri A. G. RAMACHANDRA RAO (Minister for Law and Education).—

(*a*) 169.

(*b*) 14.

(*c*) 5.

(*d*) Action has been taken to call for plans and estimates for putting up Government buildings in view of urgency and priority at four places.

ಶ್ರೀ ಕೆ. ಪಂಚಾಕ್ಷರಯ್ಯ – ಅರಸೀಕೆರೆ ತಾಲ್ಲೂಕಿನಲ್ಲಿ ಪ್ರೈಮರಿ ಸ್ಕೂಲುಗಳಿಲ್ಲದೇಯಿರುವ ಗ್ರಾಮುಗಳೆಷ್ಟು ?

ಅಧ್ಯಕ್ಷರು.—ಆ ಪ್ರಶ್ನೆ ಇಲ್ಲಿ ಹುಟ್ಟುವುದಿಲ್ಲ, ಇದು ಕಟ್ಟಡಗಳಿಗೆ ಸಂಬಂಧಪಟ್ಟದ್ದು.

ಶ್ರೀ ಕೆ. ಪಂಚಾಕ್ಷರಯ್ಯ.—ಐದು ಸ್ಕೂಲು ಕಟ್ಟಡಗಳಿಗೆ ಹಣವನ್ನು ಡಿಪಾಜಿಟ್ ಮಾಡಿದ್ದಾರೆಂದು ತಿಳಿಸಿದ್ದೀರಿ, ಅವು ಯಾವುವು ?

*ಶ್ರೀ ಎ. ಜಿ. ರಾಮಚಂದ್ರರಾವ್.—ಈ ಐದು ಸ್ಕೂಲುಗಳ ಪೈಕಿ, ನಾಲ್ಕು ಸ್ಕೂಲುಗಳಿಗೆ ಕಟ್ಟಡಗಳನ್ನೊದಗಿಸಲು ಪ್ರಯತ್ನ ಮಾಡುತ್ತೇವೆ. ಅವು ಯಾವುವೆಂಬುದು ಬೇಕಾದರೆ, ನೋಡಿ ಹೇಳುತ್ತೇನೆ.

ಶ್ರೀ ಕೆ. ಪಂಚಾಕ್ಷರಯ್ಯ.—ಈ ಪೈಕಿ ಕಣ್ಕಟ್ಟೆ ಗ್ರಾಮದವರು ಹಣವನ್ನು ಡಿಪಾಜಿಟ್ ಮಾಡಿದ್ದಾರಲ್ಲವೆ ?

ಶ್ರೀ ಎ. ಜಿ. ರಾಮಚಂದ್ರರಾವ್.—ಯಾವಯಾವ ಗ್ರಾಮಗಳವರು ಡಿಪಾಜಿಟ್ ಮಾಡಿದ್ದಾರೋ ಗೊತ್ತಿಲ್ಲ. ನೋಡಿ ಹೇಳುತ್ತೇನೆ.

ಶ್ರೀ ಕೆ. ಪಂಚಾಕ್ಷರಯ್ಯ.—ಈ ಗ್ರಾಮದವರು ಹಣ ಕೊಟ್ಟು ಎಷ್ಟು ವರ್ಷವಾಯಿತು ?

ಶ್ರೀ ಎ. ಜಿ. ರಾಮಚಂದ್ರರಾವ್.—ಕೆಲವು ವರ್ಷಗಳಾಗಿರಬೇಕು.

ಶ್ರೀ ಕೆ. ಪಂಚಾಕ್ಷರಯ್ಯ.—ಎಷ್ಟು ಹಣ ಕೊಟ್ಟಿದ್ದಾರೆ, ಎಷ್ಟು ಕೊಟ್ಟಿಲ್ಲ ಎಂಬುದನ್ನು ಹೇಳುತ್ತೀರಾ ?

ಶ್ರೀ ಎ. ಜಿ. ರಾಮಚಂದ್ರರಾವ್.—ಈಗ ವಿವರಗಳು ನನ್ನಲ್ಲಿಲ್ಲ.

ಶ್ರೀ ಕೆ. ಪಂಚಾಕ್ಷರಯ್ಯ.—ಆಗಲೇ 8 ವರ್ಷವಾಗಿದೆ. 8 ವರ್ಷವಾದರೂ ಇನ್ನೂ ಸ್ಕೂಲು ಕಟ್ಟಡ ಕಟ್ಟುವುದಕ್ಕೆ ಅವಕಾಶವಾಗಿಲ್ಲವೆಂದು ಹೇಳುತ್ತೀರಲ್ಲಾ!

Sri A. G. RAMACHANDRA RAO.—Probably that also is included in one of the buildings sanctioned.

---

## New Primary Schools in Nelamangala Taluk.

*Q.*—658. Sri D. M. GOVINDARAJU (Nelamangala).—

Will the Government be pleased to state :—

(*a*) the number of applications received since the last five years for starting new primary schools in Nelamangala Taluk ;

(*b*) the names of villages in the taluk for which schools have been sanctioned till now ?

*A.*—Sri A. G. RAMACHANDRA RAO (Minister for Law and Education).—

(*a*) Information is not readily available.

(*b*) 1 Thalekere.
2 Thotanahalli.
3 Yelekyathanahalli.
4 Vengalakempohalli.
5 Thyamagondlu.
6 Kempohalli.
7 Pillahalli.
8 Kalalaghatta.
9 Lakkanahalli.
10 Kodihalli.
11 Jodihanchipura.
12 Kanegowdanahalli.
13 Channathimmayyanapalya.
14 Jodinarayanapura.
15 Minapura.
16 Kammasandra.
17 Devaganahalli.
18 Yedehalli.

ಶ್ರೀ ಡಿ. ಎಂ. ಗೋವಿಂದರಾಜು.—ನನ್ನ (a) ಪ್ರಶ್ನೆಗೆ ಉತ್ತರವಾಗಿ ವಿವರಗಳು ದೊರೆಯಲಿಲ್ಲವೆಂದು ಹೇಳಿದ್ದಾರೆ. 5 ವರ್ಷಗಳ ಲೆಕ್ಕ ಸಿಕ್ಕಬೇಕಾದರೆ ಇಷ್ಟು ಕಷ್ಟವೇ ?

*ಶ್ರೀ ಎ. ಜಿ. ರಾಮಚಂದ್ರರಾವ್.—ಕಷ್ಟವಿಲ್ಲ ; ಸ್ವಲ್ಪ ತಡವಾಗುತ್ತದೆ.

ಶ್ರೀ ಡಿ. ಎಂ. ಗೋವಿಂದರಾಜು.—ಹಾಗಾದರೆ ವಿವರಗಳು ದೊರತಮೇಲೆಯೇ ನಾನು ಪ್ರಶ್ನೆ ಕೇಳುತ್ತೇನೆ.

ಶ್ರೀ ಎ. ಜಿ ರಾಮಚಂದ್ರರಾವ್.—ಹಾಗಲ್ಲ ; ವಿವರಗಳನ್ನು ಕಳುಹಿಸಿ ಕೊಡುತ್ತೇನೆ. ಆಮೇಲೆ ಬೇಕಾದರೆ ಬೇರೆ ಪ್ರಶ್ನೆ ಹಾಕಿ.

---

## Power supply to villages of Chamarajanagar Taluk for lift irrigation.

*Q.*—234. Sri U. M. MADAPPA (Chamarajanagar).—

Will the Government be pleased to state :—

(*a*) the names of villages of Chamarajanagar Taluk the residents of which have requested for the supply of electric power for irrigation pumps ;

(*b*) the number of estimates that have been finalised in the Department ;

(*c*) the number of estimates prepared that are under consideration ;

(*d*) the number of estimates that are yet to be prepared ?

(*e*) the number of estimates that are to be sanctioned by them ?

*A.*— **Sri H. M. CHANNABASAPPA** (Minister for Industries).—

(*a*) (1) Chickahomma
(2) Doddahomma
(3) Udigala
(4) Kodimole
(5) Basavanpura
(6) Bagali
(7) Nanjedevanpura
(8) Ganaganur
(9) Anchavadi
(10) Haradanahally
(11) Navalur
(12) Alur

(*b*) 12 estimates.
(*c*) 2.
(*d*) 4.
(*e*) 2.

ಶ್ರೀ ಯು. ಎಂ. ಮಾದಪ್ಪ.—ಯಾವುವೂವ ಗ್ರಾಮಗಳ ಎಸ್ಟಿಮೇಟುಗಳು ಈಗಾಗಲೇ ಸ್ಯಾಂಕ್ಷ್ಷ್ ಆಗಿವೆ ?

*ಶ್ರೀ ಎಚ್. ಎಂ. ಚನ್ನಬಸಪ್ಪ.—ಸ್ಯಾಂಕ್ಷ್ಷ್ ಆಗಿರತಕ್ಕ ಗ್ರಾಮಗಳ ಪಟ್ಟಿ ನನ್ನಲ್ಲಿಲ್ಲ ಸರ್ಕಾರದ ಮುಟ್ಟಿದಲ್ಲಿ ಆಗಬೇಕಾದ್ದು ಉಡಿಗಾಲ ಗ್ರಾಮದ್ದು ಮಾತ್ರ. ಬಾಕಿಯವರ್ಲಾ ಚೀಫ್ ಎಂಜಿನಿಯರ ಅಧಿಕಾರಕ್ಕೇ ಒಳಪಟ್ಟಿರುವುದರಿಂದ ಬಹುಶಃ ಸ್ಯಾಂಕ್ಷ್ಷ್ ಆಗಿವೆ. ಅಥವಾ ಸ್ಯಾಂಕ್ಷ್ಷ್ ಆಗುವುದರಲ್ಲಿವೆ.

ಶ್ರೀ ಯು. ಎಂ. ಮಾದಪ್ಪ.—(a) ಪ್ರಶ್ನೆಗೆ ಉತ್ತರವಾಗಿ ಕೊಟ್ಟಿರತಕ್ಕ ಗ್ರಾಮಗಳ ವಿಷಯದಲ್ಲಿ ಎಸ್ಟಿಮೇಟ್ ಆಗಿವೆಯೇ ?

**Sri H. M. CHANNABASAPPA.**—The cost of these estimates is not before me, but the estimated cost of Udigala and Alur villages is Rs. 73,585 which is over and above the sanctioning limit of the Chief Engineer. So, that estimate is before the Government. The rest of the estimates which are below Rs. 35.000 are within the powers of sanction by the Chief Engineer.

**Sri U. M. MADAPPA.**—My question is whether the estimates are already prepared for these villages ?

**Sri H. M. CHANNABASAPPA.**—I have given you the details. The estimates have been prepared and there are two or three cases in which estimates are yet to be prepared.

ಶ್ರೀ ಯು. ಎಂ. ಮಾದಪ್ಪ.—ಇಲ್ಲಿ (ಎ) ಪ್ರಶ್ನೆಗೆ ಉತ್ತರವಾಗಿ 12 ಹಳ್ಳಿಗಳ ಹೆಸರುಗಳನ್ನು ಕೊಟ್ಟಿದ್ದೀರಿ, (ಬಿ) ಪ್ರಶ್ನೆಗೆ ಉತ್ತರವಾಗಿ 12 ಎಸ್ಟಿಮೇಟುಗಳು ತಯಾರಾಗಿವೆಯೆಂದು ಹೇಳಿದ್ದೀರಿ. ಈ ಎಸ್ಟಿಮೇಟುಗಳು . . . . .

ಶ್ರೀ ಎಚ್. ಎಂ. ಚನ್ನಬಸಪ್ಪ.—(ಎ) ಪ್ರಶ್ನೆಗೆ ಉತ್ತರ ಕೊಟ್ಟಿರುವುದು ಯಾವುವೂವ ಗ್ರಾಮಗಳಿಂದ ಅರ್ಜಿಗಳು ಬಂದಿವೆ ಎಂದು.

ಶ್ರೀ ಯು. ಎಂ. ಮಾದಪ್ಪ.—ಅವಕ್ಕೆ ಎಸ್ಟಿಮೇಟು ಆಗಿದೆಯೇ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಅವಕ್ಕೆಲ್ಲಾ ಎಸ್ಟಿಮೇಟ್ ಆಗಿಲ್ಲ. ಎಸ್ಟಿಮೇಟ್ ಆಗಿರುವುದು ಚಿಕ್ಕಹೊಮ್ಮ, ಉಡಿಗಾಲ, ಗಂಗನೂರು, ಹಂದನಹಳ್ಳಿ, ಆಲೂರು, ಚಾಮರಾಜನಗರ ಇವುಗಳಿಗೆ ಸಂಬಂಧಪಟ್ಟ ಹಾಗೆ ಒಟ್ಟು ಹನ್ನೆರಡು.

ಶ್ರೀ ಯು. ಎಂ. ಮಾದಪ್ಪ.—(ಇ) ಪ್ರಶ್ನೆಗೆ ಉತ್ತರವಾಗಿ ಎರಡು ಎಸ್ಟಿಮೇಟುಗಳು ಇನ್ನೂ ಸ್ಯಾಂಕ್ಷ್ಷ್ ಆಗಬೇಕಾಗಿವೆಯೆಂದು ಹೇಳಿದ್ದೀರಲ್ಲಾ, ಈಗ ನೀವು ಒಂದು ಗ್ರಾಮವನ್ನು ಮಾತ್ರ ಹೇಳಿದರಲ್ಲಾ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಉಡಿಗಾಲ ಮತ್ತು ಆಲೂರು ಎರಡೂ ಸ್ಯಾಂಕ್ಷ್ಷ್ ಆಗಬೇಕು.

ಶ್ರೀ ಯು. ಎಂ. ಮಾದಪ್ಪ.—ಎಷ್ಟು ದಿವಸದಲ್ಲಿ ಸ್ಯಾಂಕ್ಷ್ಷ್ ಆಗುತ್ತದೆ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಕನಿಷ್ಟಕಾಲ ಎಷ್ಟು ಕಾಲ ಬೇಕಾಗುತ್ತದೋ ಅಷ್ಟು ಕಾಲದಲ್ಲಿ ಮಾಡುತ್ತೇವೆ.

---

## Mysore Spun Silk Mills, Ltd., Channapatna.

Q.—244. **Sri V. VENKATAPPA** (Channapatna).—Will the Government be pleased to state :—

(*a*) whether they are aware that the Mysore Spun Silk Mills, Ltd., Channapatna has become heavily indebted to the extent of about 15 lakhs of rupees and is suffering heavy losses month by month ;

(*b*) whether they are aware that the affairs of the Mills have now reached a situation which would make it difficult to survive as an Industrial concern and that the shareholders and thousands of employees are facing ruin and misery ;

(*c*) (i) the qualification of the present Manager to manage the affairs of the Mills ; (ii) whether it is not a fact that he does not possess any technical qualification ;

(*d*) whether there was not a proposal by the Government to take over the Mills ;

(*e*) the immediate plan of the Government to protect their investment in the Mills ?

A.—**Sri H. M. CHANNABASAPPA** (Minister for Industries).—

(*a*) Yes.

(*b*) No. Government are however aware that this Company is experiencing financial difficulties.

(*c*) (i) and (ii) He holds a Diploma in Commerce. He does not possess any